ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ
'ನ್ಯಾಯ ದೇಗುಲ', ಮೊದಲನೇ ಮಹಡಿ, ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು-560 027
KARNATAKA STATE LEGAL SERVICES AUTHORITY
'Nyaya Degula', 1st Floor, H. Siddaiah Road, Bengaluru-560 027.
Telephone : 080- 22111729, 22111714, Website : www.kslsa.kar.nic.in E-mail : mskar-slsa@hck.gov.in

ಸಂಖ್ಯೆ : ಕರಾಕಾಸೇಪ್ರಾ :
No. KSLSA :
03/ಎಡಿಎಂ/ಎಸ್‌ಓ/2026 ದಿನಾಂಕ:20.07.2026

ರಾಜ್ಯದ ಎಲ್ಲಾ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ.

ಮಾನ್ಯರೇ,

**ವಿಷಯ:** 20 ಶಾಖಾಧಿಕಾರಿ ಹುದ್ದೆಗಳ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಿದ್ದು ಆ ಕುರಿತು ಪ್ರಚಾರ ಪಡಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಅದರ ವ್ಯಾಪ್ತಿಯ ಕಛೇರಿಯಲ್ಲಿ ಖಾಲಿ ಇರುವ 18 ಶಾಖಾಧಿಕಾರಿಗಳ ಹುದ್ದೆಗಳಿಗೆ ಉಳಿದ ಮೂಲ ವೃಂದದಡಿಯಲ್ಲಿ ಮತ್ತು 02 ಶಾಖಾಧಿಕಾರಿ ಹುದ್ದೆಗಳಿಗೆ ಕಲ್ಯಾಣ ಕರ್ನಾಟಕ ವೃಂದದಡಿಯಲ್ಲಿ ನೇರ ನೇಮಕಾತಿ ಅರ್ಜಿಯನ್ನು ಸಲ್ಲಿಸಲು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಶಾಖಾಧಿಕಾರಿ ಹುದ್ದೆಗಳ ನೇರ ನೇಮಕಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ https://cetonline.karnataka.gov.in/kea/indexnew ಅಥವಾ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್: https://karnataka.nalsa.gov.in ವಿವರವಾದ ಮಾಹಿತಿಯನ್ನು ನೋಡಬಹುದು.

ಶಾಖಾಧಿಕಾರಿ ಹುದ್ದೆಗಳ ನೇರ ನೇಮಕಾತಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು **ದಿನಾಂಕ:20.07.2026 ರಿಂದ ಪ್ರಾರಂಭಗೊಂಡು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:19.08.2026 ಆಗಿರುತ್ತದೆ.**

ಮೇಲ್ಕಂಡ ವೆಬ್‌ಸೈಟ್‌ನಲ್ಲಿರುವ ಅಧಿಸೂಚನೆಯನ್ನು ತಮ್ಮ ಜಿಲ್ಲಾ ನ್ಯಾಯಾಲಯಗಳ ಅಂತರ್ಜಾಲದಲ್ಲಿ Webhost ಮಾಡುವಂತೆ ಕೋರಿದೆ. ಮುಂದುವರೆದು, ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರಚಾರ ಅಧಿಸೂಚನೆಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ಅದನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ/ಜಿಲ್ಲಾ ನ್ಯಾಯಾಲಯ/ತಾಲ್ಲೂಕು ನ್ಯಾಯಾಲಯ, ಜಿಲ್ಲಾ ಮತ್ತು ತಾಲ್ಲೂಕು ವಕೀಲರ ಸಂಘದ ಕಛೇರಿಯ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸುವ ಮೂಲಕ ಹೆಚ್ಚಿನ ಪ್ರಚಾರ ಮಾಡುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

(ಹೆಚ್. ಶಶಿಧರ ಶೆಟ್ಟಿ)
ಸದಸ್ಯ ಕಾರ್ಯದರ್ಶಿ

**ಪ್ರತಿಯನ್ನು:**
ರಾಜ್ಯದ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿಯವರುಗಳಿಗೆ-ಮಾಹಿತಿಗಾಗಿ ಮತ್ತು ಸೂಕ್ತಕ್ರಮಕ್ಕಾಗಿ.